ಕಥೆ

# ನಿನ್ನ ನೆನಪಿಗೆ





ಮಲಯಾಳಂ:

**ಎಂ.ಟಿ. ವಾಸುದೇವನ್ ನಾಯರ್**

ಕನ್ನಡಕ್ಕೆ:

**ಮೋಹನ ಕುಂಟಾರ್**

ಕಲೆ: ರೂಪಶ್ರೀ ಕಲ್ಲಿಗನೂರು


ಸುಮಾರು ಹನ್ನೆರಡು ವರ್ಷಗಳ ಬಳಿಕ ಲೀಲಾಳನ್ನು ನೆನಪಿಸಿಕೊಂಡೆ. ಲೀಲಾ ಎಂದು ಕೇಳಿಸಿಕೊಂಡಾಗ ನಿಮಗೆ ಯೋಚನೆಯಾಗಬಹುದು. ಅದಕ್ಕೆ ತಪ್ಪು ತಿಳಿಯಬಾರದೆಂದು ಮೊದಲೇ ಹೇಳಿಬಿಡಲೇ? ಅವಳು ನನ್ನ ಸಹೋದರಿ. ಈ ವಾಸ್ತವ ತಿಳಿದಿರುವವರು ಜಗತ್ತಿನಲ್ಲಿ ಕೆಲವೇ ಕೆಲವರು ಮಾತ್ರ ಇದ್ದಾರೆ.

ಲೀಲಾಳ ಕುರಿತು ನೆನಪಿಸಿಕೊಳ್ಳಲು ಕಾರಣ ಪೆಟ್ಟಿಗೆಯಲ್ಲಿ ಸಿಕ್ಕಿದ ರಬ್ಬರ್ ಗೊಂಬೆ. ಬೇಡವಾದ ಶರ್ಟು, ಪಂಚೆ, ಹಳೆಯ ಕಾಗದಗಳು ಹಾಕಿಟ್ಟ ಪೆಟ್ಟಿಗೆಯಲ್ಲಿ ಮತ್ತೊಮ್ಮೆ ಪರಿಶೋಧಿಸಿ ನೋಡಿದಾಗ ಆ ಹಳೆಯ ರಬ್ಬರ್ ಗೊಂಬೆ ಕಾಣಿಸಿತು. ಅದರ ಬಣ್ಣ ಮಸುಕಾಗಿ, ಆಕರ್ಷಣೆಯೂ ಇಲ್ಲದಾಗಿತ್ತು. ಸ್ಫಟಿಕದಿಂದ ಮಾಡಿದ ಕಣ್ಣುಗಳು ಮಾತ್ರ ಮಸುಕಾಗಿರಲಿಲ್ಲ.

ಒಂದು ಕಾಲದಲ್ಲಿ ಅದು ನನ್ನ ಅತ್ಯಂತ ಪ್ರೀತಿಯ ಗೆಳೆಯನಾಗಿತ್ತು. ಅದರ ಒಡೆಯನಾದುದಕ್ಕೆ ನನಗೆ ಅಭಿಮಾನವಿದೆ. ತುಂಬಾ ಆಸೆಪಟ್ಟು ಸಿಕ್ಕಿದ್ದು. ಚೀಲದಲ್ಲಿ ಹಾಕಿಕೊಂಡು ಶಾಲೆಗೆ ಹೋದಾಗ ನಾನೇ ಸ್ವಯಂ ಉನ್ನತ ವ್ಯಕ್ತಿಯಾದೆ ಎಂದು ಅನ್ನಿಸಿತು. ಕಾರಣ ನನ್ನ ಚೀಲದ ಒಳಗೆ ಬೆಲೆಬಾಳುವ ಒಂದು ವಸ್ತುವಿದೆ. ಅಪ್ಪುಕುಟ್ಟನ ಹಳೆಯ ಡಬ್ಬಿಗಿಂತ, ಎಂಬ್ರಾನ್ ಕುಟ್ಟಿಯ ಮೌತ್ ಓರ್ಗಾನ್‌ಗಿಂತಲೂ ಮೌಲ್ಯಯುತವಾದುದು ನನ್ನ ಗೊಂಬೆ. ಅದೂ ಕೊಳಂಬೋದಿಂದ ಕೊಂಡು ತಂದದ್ದು! ರಬ್ಬರ್ ಗೊಂಬೆಗೆ ಎರಡು ವಿಶೇಷತೆಗಳಿವೆ. ಅಡಿ ಭಾಗದ ಕೀಲು ಒತ್ತಿದರೆ ಅದರ ಹೊಟ್ಟೆ ತೆರೆದುಕೊಳ್ಳುತ್ತದೆ. ಹೊಟ್ಟೆಯಲ್ಲಿ ಮಿದು ಮಿದುವಾಗಿರುವ ಕುಷನ್‌ನ ಮೇಲೆ ಕಡು ನೀಲ ಬಣ್ಣದ ಒಂದು ಪುಟ್ಟ ಬಾಟ್ಲಿ. ಅದರಲ್ಲಿ ಸೆಂಟ್. ಮುಚ್ಚಳ ತೆರೆದರೆ ಜಾಜಿ ಮಲ್ಲಿಗೆಯ ಪರಿಮಳ ಕ್ಲಾಸಿನಲ್ಲಿ ಇಡಿಯಾಗಿ ವ್ಯಾಪಿಸುತ್ತಿತ್ತು. ಹುಡುಗಿಯರ ಕಡೆಯಿಂದ ಪಿಸುಗುಟ್ಟುವುದು ಕೇಳಿಸುತ್ತಿತ್ತು:

'ಆ ಹುಡುಗನ ಕೈಯಲ್ಲಿ!' 'ಆ ಹುಡುಗ'